**ಕರ್ನಾಟಕ ಸರ್ಕಾರ**
**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಐವಾನ್.ಎ.ಶಾಹಿ ಬಡಾವಣೆ, ಕಲಬುರಗಿ**

**ಸಂಖ್ಯೆ: ಸಿ2(2)ಆಡಳಿತ/ಕಾ.ಸ್ವ.ಹೆ.ಬಡ್ತಿ/05/2024-25(III)** **ದಿನಾಂಕ: 15/04/2025**

**ಜ್ಞಾಪನ**

ವಿಷಯ: 1999 ನೇ ಸಾಲಿನಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ನೇಮಕಗೊಂಡು ಮುಂಬಡ್ತಿ ಇಲ್ಲದೆ ಸತತ 20 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿರುವ ಗ್ರೂಪ್-'ಬಿ' ವೃಂದದ ಅಧಿಕಾರಿಗಳಿಗೆ ಒಂದನೇ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 13 ಎಸ್‌ಆರ್‌ಪಿ 2002, ದಿನಾಂಕ: 09/05/2002.
2) ಸರ್ಕಾರದ ಆದೇಶ ಸಂಖ್ಯೆ: ಇಡಿ 250 ಡಿಪಿಐ 2006, ದಿನಾಂಕ: 22/02/2008.
3) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 31 ಎಸ್‌ಆರ್‌ಪಿ 2007(iii), ದಿನಾಂಕ: 14/08/2008.
4) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 30 ಎಸ್‌ಆರ್‌ಪಿ 2012, ದಿನಾಂಕ: 31/01/2014.
5) ಸರ್ಕಾರಿ ಆದೇಶ ಸಂಖ್ಯೆ: ಇಡಿ 40 ಎಸ್‌ಒಹೆಚ್ 2019, ದಿನಾಂಕ: 16/08/2021.
6) ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡುವಳಿಗಳು ದಿನಾಂಕ: 01/02/2025.

ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಇವರನ್ನು ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ನೇಮಕಾತಿ ಪ್ರಾಧಿಕಾರವಾಗಿ ಗುರುತಿಸಲಾಗಿದೆ.

ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಸತತ 20 ವರ್ಷಗಳ ಕಾಲ ಯಾವುದೇ ಮುಂಬಡ್ತಿ ಇಲ್ಲದೆ, ನಿರಂತರ ಅದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವ ಪ್ರಯುಕ್ತ ಉಲ್ಲೇಖ (1) ಮತ್ತು (4) ರನ್ವಯ ಒಂದು ಹೆಚ್ಚುವರಿ ವೇತನ ಬಡ್ತಿಗೆ ಅರ್ಹರಿರುತ್ತಾರೆ. ಉಲ್ಲೇಖ (6) ರನ್ವಯ ವಿಭಾಗದ ಉಪ ನಿರ್ದೇಶಕರು(ಆಡಳಿತ) ರವರು ಸಲ್ಲಿಸಿರುವ ಕೆಳಕಂಡ ಅನುಬಂಧ-1 ರಲ್ಲಿ ನಮೂದಿಸಿದ ಅಧಿಕಾರಿಗಳು, ಅವರು ನೇಮಕಾತಿ ಹೊಂದಿದ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ 20 ವರ್ಷ ಮತ್ತು ಅದಕ್ಕೂ ಮೀರಿ ಸೇವೆ ಸಲ್ಲಿಸಿರುವುದರಿಂದ, ಅವರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗೆ ಶಿಫಾರಸ್ಸು ಮಾಡಿ ಅಗತ್ಯವಿರುವ ದಾಖಲೆಗಳನ್ನು ಲಗತ್ತಿಸಿ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗಳನ್ನು ದಿನಾಂಕ: 01/02/2025 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ಉಲ್ಲೇಖ (1) ರ ಆದೇಶದಲ್ಲಿ ವಿಧಿಸಿದ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಕೆಳಕಂಡ ಪಟ್ಟಿಯಲ್ಲಿರುವ ಅರ್ಹ ಗ್ರೂಪ್-ಬಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಲಿ ವೇತನ ಪಡೆಯುತ್ತಿರುವ ವೇತನ ಶ್ರೇಣಿಯಲ್ಲಿ, ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಕಾಲಂ 4 ರಲ್ಲಿ ನಮೂದಿಸಿರುವ ದಿನಾಂಕದಿಂದ ಅನ್ವಯಿಸುವಂತೆ ಮಂಜೂರು ಮಾಡಿ ಆದೇಶಿಸಿದೆ.

(ಡಾ. ಆಕಾಶ್ ಎಸ್) ಭಾ.ಆ.ಸೇ
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ

ಪ್ರತಿಯನ್ನು:

1) ಮಹಾಲೇಖಪಾಲರು(ಲೆ&ಹ), ಕರ್ನಾಟಕ ಪಾರ್ಕ ಹೌಸ್ ರೋಡ್ ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
3) ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಧಾರವಾಡ.
4) ಉಪ ನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಯಾದಗಿರಿ, ಕಲಬುರಗಿ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ.
5) ಸಂಬಂಧಿಸಿದ ಡಯಟಗಳ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ.

**ಕರ್ನಾಟಕ ಸರ್ಕಾರ**
**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಐವಾನ್.ಎ.ಶಾಹಿ ಬಡಾವಣೆ, ಕಲಬುರಗಿ**

**ಸಂಖ್ಯೆ: ಸಿ2(2)ಆಡಳಿತ/ಕಾ.ಸ್ವ.ಹೆ.ಬಡ್ತಿ/05/2024-25(III)** **ದಿನಾಂಕ: 15/04/2025**

**ಅನುಬಂಧ-1**

ಗ್ರೂಪ್'ಬಿ' ಸರಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಯಲ್ಲಿ 20 ವರ್ಷಗಳ ಸೇವೆ ಸಲ್ಲಿಸಿದ್ದಕ್ಕೆ ಒಂದನೇ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ವಿವರ

| ಕ್ರ ಸ | ಅಧಿಕಾರಿ ಹೆಸರು ಹುದ್ದೆ ವಿಳಾಸ | ನೇಮಕಾತಿ/ ಸೇವಾ ಸಕ್ರಮ/ಬಡ್ತಿ ಹೊಂದಿದ ದಿನಾಂಕ | ಪರಿವೀಕ್ಷಣಾ ಅವಧಿ ಘೋಷಣೆ ದಿನಾಂಕ | 20 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗೆ ಅರ್ಹತಾ ದಿನಾಂಕ | ಪ್ರಸ್ತುತ ಪಡೆಯುತ್ತಿರುವ ವೇತನ ಹಾಗೂ ವೇತನ ಶ್ರೇಣಿ | 20 ವರ್ಷದ 1ನೇ ಹೆಚ್ಚುವರಿ ವೇತನ ಬಡ್ತಿ ನಂತರ ನಿಗದಿಪಡಿಸಿದ ವೇತನ & ಶ್ರೇಣಿ |
|---|---|---|---|---|---|---|
| 1 | ಎಸ್ ವಿ ಶಿವಮ್ಮ, ಮುಖ್ಯ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ಯರಗೇರಾ, ತಾ: ಜಿ: ರಾಯಚೂರು. | 17-11-1999 | 17-11-2001 | 17-11-2019 | 72500 [48900-92700] | 74400 [48900-92700] |
| 2 | ಭರತರಾಜ ಸಾವಳಗಿ, ನಿವೃತ್ತ ಹಿರಿಯ ಉಪನ್ಯಾಸಕರು, ಡಯಟ್, ಯಾದಗಿರಿ. | 19-01-1994 (ಮು.ಶಿ ವೃಂದ) 31-01-2020 (Gr 'A' Jr) | 1996 (ನಕಲು ಪ್ರತಿ ಸಲ್ಲಿಸಿರುವರು) | 19-01-2014 | 36300 [24000-45300] | 37200 [24000-45300] |
| 3 | ಚಾಂದ ಬೀ, ಉಪನ್ಯಾಸಕರು, ಸಿ.ಟಿ.ಇ, ಕಲಬುರಗಿ. | 03-05-1999 | 20-08-2005 | 09-08-2019 | 72500 [48900-92700] | 74400 [48900-92700] |
| 4 | ಶಿವಪ್ರಕಾಶ ಚಿಗಟೇರಿ, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಬಳ್ಳಾರಿ. | 22-11-1999 | 29-11-2001 | 22-11-2019 | 72500 [48900-92700] | 74400 [48900-92700] |
| 5 | ವಿಜಯಲಕ್ಷ್ಮಿ ಸಿದ್ದಯ್ಯ ಒಡಯರ, ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮುನಿರಾಬಾದ, ಜಿ: ಕೊಪ್ಪಳ. | 30-04-1999 | 30-04-2001 | 30-04-2019 | 72500 [48900-92700] | 74400 [48900-92700] |
| 6 | ನಿರ್ಮಲಾ ಬಿ, ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮುನಿರಾಬಾದ, ಜಿ: ಕೊಪ್ಪಳ. | 29-04-1999 | 29-04-2001 | 29-04-2019 | 72500 [48900-92700] | 74400 [48900-92700] |

(ಡಾ. ಆಕಾಶ್ ಎಸ್) ಭಾ.ಆ.ಸೇ
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ